Assistant Commissioners not included in I.A.S. list.

Q.—431. Sm. Bellary SIDDAMMA (Davangere).—

Will the Government be pleased to state :—

(*a*) the number of Assistant Commissioners who are not included in the I.A.S. cadre ;

(*b*) the procedure that is adopted in granting increments to them ;

(*c*) how the twelve vacant posts of I.A.S. Officers will be filled up ;

(*d*) whether appointments to these posts will be made in the order of seniority ?

A.—Sri Kadidal MANJAPPA (Minister for Revenue and Public Works).—

(*a*) 100.

(*b*) The Accountant General authorises the drawal of increments as and when they accrue and fall due unless the State Government withhold it.

(*c*) There are no vacant posts of I.A.S. Officers.

(*d*) Does not arise in view of reply to clause (*c*) above.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇಪ್ಪತ್ತು ಇಪ್ಪತ್ತೈದು ವರ್ಷ ಸರ್ವಿಸ್ ಆಗಿರುವವರ ಸಂಖ್ಯೆ ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಸಿವಿಲ್ ಲಿಸ್ಟ್ ನೋಡಿದರೆ ಅದು ಗೊತ್ತಾಗುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಕಡಮೆ ಸರ್ವಿಸ್ ಆಗಿರುವವರಿಗೆ ಡೆಪ್ಯುಟಿ ಕಮಿಷನರ ಕೆಲಸ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಐ.ಎ.ಎಸ್. ಯೋಜನೆಯ ಪ್ರಕಾರ ಹಾಗಾಗಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಾಗಾದರೆ ಹೆಚ್ಚು ಕಾಲ ಕೆಲಸಮಾಡಿರುವವರಿಗೆ ಅನಂತೋಷ ಹೆಚ್ಚಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ಮಟ್ಟಿಗೆ ಆಗಿಯೇ ಆಗುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇಂಥಾದ್ದನ್ನು ಹೋಗಲಾಡಿಸುವುದು ಅಗತ್ಯವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಐ.ಎ.ಎಸ್. ಯೋಜನೆಯ ಪ್ರಕಾರ ನೌಕರಿಗಳಿಗೆ ಅಧಿಕಾರಿಗಳನ್ನು ನೇಮಕಮಾಡಲಾಗುತ್ತದೆ. ಈ ಯೋಜನೆಯ ಪ್ರಕಾರ ಈ ಒಂದು ತೊಂದರೆ ನಿವಾರಣೆಯಾಗುವುದಿಲ್ಲವೆಂದು ಅರಿಕೆಮಾಡಬೇಕಾಗಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸಂಸ್ಥಾನದಲ್ಲಿ I.A.S. ಹುದ್ದೆಗೆ ಸೇರಿಸಲ್ಪಡದಿರುವ Assistant Commissionerಗಳ ಸಂಖ್ಯೆ 100 ಎಂಬುದಾಗಿ ಹೇಳಿದ್ದೀರಿ? ಇವರನ್ನು I.A.S. ಹುದ್ದೆಗಳಿಗೆ ಸೇರಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಈ ಸರ್ಕಾರಕೂ ಮತ್ತು ಕೇಂದ್ರ ಸರ್ಕಾರಕ್ಕೂ ಆದ ಒಪ್ಪಂದದ ಪ್ರಕಾರ, I.A.S. ಲಿಸ್ಟಿನಲ್ಲಿ ಸೇರದೆ ಇರತಕ್ಕಂಥ ಅಧಿಕಾರಿಗಳನ್ನು ಒಂದು ಸಮಿತಿ ಮೂಲಕ ಪುನಃ ಪರೀಕ್ಷೆ ಮಾಡಿ ಒಂದು ಲಿಸ್ಟನ್ನು ತಯಾರಿಸಿ ಕಳುಹಿಸಬೇಕೆಂದಿತು. ಆ ಪ್ರಕಾರ ಈ ಸರಕಾರದವರು ಒಂದು ಸಮಿತಿಯನ್ನು ರೆವಿನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನೇಮಕಮಾಡಿದರು. ಆ ಸಮಿತಿಯವರು ಅಧಿಕಾರಿಗಳನ್ನು interview ಮಾಡಿ ಒಂದು ಲಿಸ್ಟ್ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಆ ಪೈಕಿ ಕೆಲವರ ಹೆಸರನ್ನು ಕೇಂದ್ರ ಸರಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಲಿಸ್ಟಿನಲ್ಲಿರುವ ಅಧಿಕಾರಿಗಳನ್ನು ಕೂಡಲೆ I.A.S. Cadre ಗೆ ಸೇರಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್. – ಪುನಃ ಜಾಗಗಳು ಖಾಲಿಬಿದ್ದಾಗ ಅಧಿಕಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಈ ಲಿಸ್ಟನ್ನು ವಿಮರ್ಶೆಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ಹೇಗೆ promotion ಮಾಡಬೇಕೆಂಬುದರ ಬಗ್ಗೆ ನಿಬಂಧನೆಗಳಿವೆ. ಅದರ ಪ್ರಕಾರ ಕ್ರಮತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕೇಂದ್ರ ಸರಕಾರದಿಂದ ಮಂಜೂರಾದ ಲಿಸ್ಟ್ ಪ್ರಕಾರ ಕೆಲಸ ಖಾಲಿಬಿದ್ದ ಹಾಗೆ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಉದ್ದೇಶವೇನೋ ಹಾಗೆಯೇ ಇದೆ. ರೂಲ್ಸ್ ಜಾರಿಗೆ ಬಂದನಂತರ ಯಾವ ಪರಿಸ್ಥಿತಿಯುಂಟಾಗುತ್ತದೆ ಎಂಬುದನ್ನು ನಿರ್ಧಾರವಾಗಿ ಹೇಳಲಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮೈಸೂರು ಸರ್ಕಾರದಿಂದ ಹೊರಗಡೆ deputation ಕಳುಹಿಸಿದ ಅಧಿಕಾರಿಗಳು ಎಷ್ಟು ಜನ ಇದ್ದಾರೆ ?

Sri Kadidal MANJAPPA.—There is another question pertaining to the same subject and I will answer these *details* in that connection. No information just at present.

ಶ್ರೀ ಬಿ. ರಾಚಯ್ಯ.—I.A.S. ಆಫೀಸರುಗಳನ್ನು ನಮ್ಮ ಸಂಸ್ಥಾನಕ್ಕೆ ತೆಗೆದುಕೊಳ್ಳಬೇಕೆಂಬುದಾಗಿ ಏನಾದರೂ ಕಡ್ತಾಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಬಿ. ರಾಚಯ್ಯ.—ಆ ರೀತಿ ಕಡ್ತಾಯವಿದ್ದ ಮೇಲೆ ಕೆಲವರನ್ನು I.A.S. ದರ್ಜೆಗೆ ಸೇರಿಸಿ ಇನ್ನೂ ಕೆಲವರನ್ನು ಸೇರಿಸದೆ ಇರುವುದು ತಾರತಮ್ಯ ಮಾಡಿದಂತಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—Selection ಮಾಡುವಾಗ ಅರ್ಹತೆ ಮುಂತಾದುವನ್ನು ಗಮನಕ್ಕೆ ತೆಗೆದುಕೊಂಡು ಅಧಿಕಾರಿಗಳನ್ನು ಚುನಾಯಿಸಿದ್ದೇವೆ.

ಶ್ರೀ ಬಿ. ರಾಚಯ್ಯ.—Unrepresented Communities ಮತ್ತು ಹಿಂದುಳಿದ ಪಂಗಡದವರಿಗೆ ಈ ಹುದ್ದೆಗಳಲ್ಲಿ ಯಾವ ರೀತಿ ಪ್ರಾತಿನಿಧ್ಯವನ್ನು ಕೊಟ್ಟಿದೆ!

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ವರ್ಗದವರಿಗೆ ನೇರವಾಗಿ ನೌಕರಿಗೆ ಸೇರಿಸಿಕೊಳ್ಳುವಾಗ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕು ಎಂದು ಕೇಂದ್ರ ಸರ್ಕಾರದಿಂದ ಆಜ್ಞೆ ಆಗಿದೆ.

ಶ್ರೀ ಬಿ. ರಾಚಯ್ಯ.—Promotions ನಂದರ್ಭದಲ್ಲಿಯೂ ಕೂಡ ಕೆಲವು ಸ್ಥಾನಗಳನ್ನು ಮೊನಲಾಗಿಡಬೇಕು ಎಂದು ಕೇಂದ್ರ ಸರ್ಕಾರದಿಂದ ಆಜ್ಞೆ ಬಂದಿಲ್ಲವೇ ?

Sri Kadidal MANJAPPA.—There is no such order.

*ಶ್ರೀ ಬಿ. ರಾಚಯ್ಯ.—ಈ 100 ಅಧಿಕಾರಿಗಳಲ್ಲಿ I.A.S. cadre ಗೆ ಸೇರಿಸದೆ ಇರುವವರು ಎಷ್ಟು ಮಂದಿ ಇದ್ದಾರೆ ?

Sri Kadidal MANJAPPA.—I want notice.

ಶ್ರೀ ಬಿ. ರಾಚಯ್ಯ.—ಈ 100 ಜನ I.A.S. cadreಗೆ ಸೇರದೆ ಇರುವ ಅಧಿಕಾರಿಗಳ ಪೈಕಿ, ಎಷ್ಟು ಜನ ಹರಿಜನರು ಇದ್ದಾರೆ ?

Sri Kadidal MANJAPPA.—Even for that, I want notice.

ಶ್ರೀ ಬಿ. ರಾಚಯ್ಯ.—I.A.S. cadreಗೂ State Governmentಗೂ ತೆಗೆದುಕೊಳ್ಳುವ ನಂದರ್ಭದಲ್ಲಿ ಯಾವುದಾದರೂ ಒಂದು eligibility ಲಿಸ್ಟ್ ಮಾಡಿದ್ದೀರಾ ?

Sri Kadidal MANJAPPA.—That is a list to which I have referred to in my reply.

ಶ್ರೀ ಬಿ. ರಾಚಯ್ಯ.—I.A.S. ಅಧಿಕಾರಿಗಳು ಮತ್ತು Deputy Commissionerಗಳ cadre ಲಿಸ್ಟ್ ಬೇರೆ ಮತ್ತು ಆ cadreಗೆ ಸೇರತಕ್ಕಂಥ eligibility list ಬೇರೆ ಅಲ್ಲವೇ ?

Sri Kadidal MANJAPPA.—The eligibility list is quite different from the list of I.A.S. Officers.

ಶ್ರೀ ಬಿ. ರಾಚಯ್ಯ.—ಈ eligibility listನಲ್ಲಿ ಎಷ್ಟು ಜನ ಹರಿಜನ ಅಧಿಕಾರಿಗಳನ್ನು ಮೈಸೂರು ಸರ್ಕಾರದವರು ಚುನಾವಣೆ ಮಾಡಿದ್ದಾರೆ ?

Sri Kadidal MANJAPPA.—There is another question and I think in connection with that question, I will be able to give a reply to this.

Sri B. RACHIAH.—Out of those who have been selected as I.A.S. Officers from among the Assistant Commissioners, may I know the total number of Assistant Commissioners belonging to the Scheduled Castes in Mysore State and what are their names ?

Sri Kadidal MANJAPPA.—I will be able to give that information at a later date.

Mr. SPEAKER.—That has been answered during the last Session.

ಶ್ರೀ ಬಿ. ರಾಚಯ್ಯ.—ಇಂಡಿಯಾ ಸರ್ಕಾರದವರು ಇಷ್ಟೇ ಶೇಕಡವಾರು ಪ್ರಾತಿನಿಧ್ಯವನ್ನು ಹರಿಜನರಿಗೆ I.A.S. ಹುದ್ದೆಗಳಲ್ಲಿ ಕೊಡಬೇಕೆಂದು ನಿಗದಿ ಮಾಡಿದ್ದಾರೆಯೇ ?

Sri Kadidal MANJAPPA.—The percentage is prescribed in the case of promotion.

Sri V. MASIYAPPA.—Is there any move on the part of Government of Mysore to get the Mysore Service exempt from I.A.S. scheme ?

Sri Kadidal MANJAPPA.—We have agreed with the Central Government regarding the integration of I.A.S. Scheme. Just at present there is no such move.

ಶ್ರೀ ವಿ. ಮಸಿಯಪ್ಪ.—ನಾವು I.A.S. cadreಗೆ ಸೇರಿದಮೇಲೆ Mysore State ನಿಂದ ಹೊರಗಡೆ ಎಷ್ಟುಜನ ಅಧಿಕಾರಿಗಳನ್ನು ಕಳುಹಿಸಿದ್ದೇವೆ ?

Sri Kadidal MANJAPPA.—A few of them have been sent to the Centre. One has been sent to Pondichery another has been sent to Coorg, and yet another has been sent to Hyderabad.

ಶ್ರೀ ಎಸ್. ಸಿದ್ದಪ್ಪ.—ಮೈಸೂರು ಸರ್ಕಾರಕ್ಕೆ ಈ I.A.S. ಪದ್ಧತಿಯಿಂದ ಪ್ರಯೋಜನವಾಗಿದೆಯೇ ?

ಅಧ್ಯಕ್ಷರು.—ಅದಕ್ಕೆ ಉತ್ತರ ಆಗಲೇ ತಿಳಿಸಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—I.A.S. ಪದ್ಧತಿಯಿಂದ ಅನನುಭವಿಗಳಾದ ಚಿಕ್ಕವಯಸ್ಸಿನ ಅಧಿಕಾರಿಗಳು ಹೊರಗಡೆಯಿಂದ ಇಲ್ಲಿಗೆ ಬಂದಿರುವುದರಿಂದ ಕೆಲಸ ಕಾರ್ಯಗಳು ಜಾಗ್ರತೆಯಾಗದೆ ದೇಶದ ಪ್ರಗತಿಗೆ ತೊಂದರೆಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅದು ಅಭಿಪ್ರಾಯದ ಮಾತು.

Sri M. PALANIYAPPAN.—Have the Government got a list of I.A.S. Officers approved by the Government of India ?

Sri Kadidal MANJAPPA.—The list has been recently approved by the Government of India ?

Sri M. PALANIYAPPAN.—May I know the number that has been included in the list ?

Sri Kadidal MANJAPPA.—I want notice for that.

Sri M, PALANIYAPPAN.—May I know whether an eligibility list has been prepared for a second time ?

Sri Kadidal MANJAPPA.—Even for that, I require notice. I will be able to furnish all the information relevant to this question at a later stage when another question on this subject comes up.

ಶ್ರೀ ಬಿ. ಹುಚ್ಚೇಗೌಡ.—ಮೈಸೂರಿನಿಂದ I.A.S. ಅಧಿಕಾರಿಗಳು ಹೊರಗಡೆ ಹೋಗಿದ್ದಾರೆಂದು ಹೇಳಿದಿರಿ. ಹಾಗೆಯೇ ಹೊರಗಡೆಯಿಂದ I.A.S. ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ direct recruitment ಪ್ರತಿ ವರ್ಷ ನಡೆಸುತ್ತಾರೆ. ಪ್ರತಿ ವರ್ಷ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಪೈಕಿ ಒಬ್ಬೊಬ್ಬರನ್ನು ಇಲ್ಲಿಗೆ ಕಳುಹಿಸುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಉತ್ತೀರ್ಣರಾದವರ ಹೈಕಿ ಮೈನೂರಿನವರು ಯಾರಾದರೂ ಇದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮೈನೂರಿನವರು ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗ ನಮ್ಮಲ್ಲಿ ಹೊರಗಡೆ ಹೋಗದೆ ಇರುವ ಆಫೀಸರುಗಳ ಹೈಕಿ ದಕ್ಷತೆಯಿಂದ ಕೆಲಸ ನಡೆಸತಕ್ಕಂಥವರು Civil Serviceನಲ್ಲಿ ಇದ್ದಾರೆಂದು ಭಾವಿಸೋಣವೇ?

ಶ್ರೀ ಕಡಿದಾಳ್ ಮಂಜಪ್ಪ.—I.A.S.ಗೆ ಸೇರದೆ ಇರುವವರ ಹೈಕಿ ದಕ್ಷರಾದ ಅಧಿಕಾರಿಗಳು ಅನೇಕ ಮಂದಿ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಹೀಗಿದ್ದರೂ ಕೂಡ I.A.S. ಅಧಿಕಾರಿಗಳನ್ನು ನಾವು ತಗೆದುಕೊಳ್ಳುವುದರಿಂದ ಹಣಕಾಸಿನ ಮತ್ತು ಆದಳಿತ ದೃಷ್ಟಿಯಲ್ಲಿ ಬಹಳ ತೊಂದರೆ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—I.A.S. Scheme ಪ್ರಕಾರ I A.S. ಅಧಿಕಾರಿಗಳಿಗೆ ಹೆಚ್ಚಿಗೆ ಸಂಬಳ ಕೊಡಬೇಕಾದುದು ಅನಿವಾರ್ಯವಶ್ಯಕ.

ಶ್ರೀ ಬಿ. ಹುಚ್ಚೇಗೌಡ.—I.A.S. Scheme ಇರುವವರೆಗೆ ಈ ರೀತಿ ತೊಂದರೆ ಬರುತ್ತದೆ. ಆದ್ದರಿಂದ ಇದನ್ನು ಜಾಗ್ರತೆ ಕೊನೆಗಾಣಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಯಾವ ಜವಾಬನ್ನೂ ಹೇಳಲಾರೆ.

Sri H. M. CHANNABASAPPA.—Will you please tell me the extra expenditure involved per year on account of the I.A.S. Scheme introduced in the Mysore State?

Sri Kadidal MANJAPPA.—I want notice.

Sri H. M. CHANNABASAPPA.—Can you tell me the quantum of benefit derived out of this Scheme, Sir? Is there any period contemplated for this agreement?

Sri Kadidal MANJAPPA.—There is no period contemplated.

Sri H. M. CHANNABASAPPA.—Are we free to break the agreement at any time we want?

Sri Kadidal MANJAPPA.—I do not know.

Sri H. M. CHANNABASAPPA.—Therefore will you kindly examine the position and let me know?

Sri Kadidal MANJAPPA.—I have no objection to examine the matter.

ಶ್ರೀ ಎಂ. ಚಿಕ್ಕಲಿಂಗಯ್ಯ.—I.A.S. ಕೇಡರಿಗೆ ಸೇರಿರುವ ಈ 10 ಜನ ಅಸಿಸ್ಟೆಂಟ್ ಕಮಿಷನರುಗಳೂ I.A.S.ಗೆ ಸೇರದ ಇದ್ದರೆ ಅಸಿಸ್ಟೆಂಟ್ ಕಮಿಷನರುಗಳಾಗಿಯೇ ರಿಟೈರ್ ಆಗಬೇಕಾಗುತ್ತದೆಯಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—Promotion vacancyಗಳಲ್ಲಿ ಅವಕಾಶವಿದ್ದರೆ ಇವರಲ್ಲ ದಕ್ಷತೆ ಸರಿಯಾಗಿದ್ದವರಿಗೆ, ಡೆಪ್ಯುಟಿ ಕಮಿಷನರಾಗಿ ಬಡ್ತಿ ಸಿಕ್ಕಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗಾಗಲೇ ನೀವು ಜೂನಿಯರ್ ಲಿಸ್ಟ್, ಸೀನಿಯರ್ ಲಿಸ್ಟ್ ಎಂದು ಪಟ್ಟಿ ಮಾಡಿಬಿಟ್ಟಿದ್ದೀರಿ. ಅದರಲ್ಲೆ ನೂರಾರು ಜನರಿರುವಾಗ, ಅವರನ್ನೆಲ್ಲಾ promote ಮಾಡುವವರೆಗೂ ಇವರುಗಳಿಗೆ ಮೇಲಿನ ಹುದ್ದೆ ಸಿಕ್ಕುವುದಿಲ್ಲ, ಇವರು ಅಸಿಸ್ಟೆಂಟ್ ಕಮಿಷನರುಗಳಾಗಿಯೇ ಇರಬೇಕಾಗುತ್ತದಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾಗಬಹುದೆಂದು ನನ್ನ ಊಹೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಯೋಜನೆಯನ್ನು ಪುನರ್ವಿಮರ್ಶೆಮಾಡಿ, ಈ ನ್ಯೂನತೆಯನ್ನು ಪರಿಹಾರ ಮಾಡುವುದಕ್ಕೇನಾದರೂ Solution ಕಂಡು ಹಿಡಿಯುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—Solution ಕಂಡು ಹಿಡಿಯುವುದು ಕಷ್ಟವಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ವಿಚಾರವಾಗಿ ಇಂಡಿಯಾ ಸರ್ಕಾರದವರಿಗೆ ಮನವಿಮಾಡಿ ಪುನಃ ಪರಿಶೀಲನೆಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮನವಿಮಾಡಿಕೊಂಡಿದ್ದೇವೆ.

ಶ್ರೀ ಆರ್. ಅನಂತರಾಮ್.—ಐ. ಎ. ಎಸ್. ಆಫೀಸರುಗಳಿಗಾಗಿ ಎಷ್ಟು ಸ್ಥಾನಗಳನ್ನು ಮೀಸಲಾಗಿಟ್ಟಿದ್ದೀರಿ, ನಮ್ಮ ಸಂಸ್ಥಾನದಲ್ಲಿ?

Sri Kadidal MANJAPPA.—I don't remember.

ಶ್ರೀ ಆರ್. ಅನಂತರಾಮ್.—ಹೀಗೆ ಮೀಸಲಾಗಿಟ್ಟಿರತಕ್ಕ ಸ್ಥಾನಗಳನ್ನು ಅದಷ್ಟು ಮಟ್ಟಿಗೆ ಕಡಮೆ ಮಾಡಿ Non-I.A.S. ಗಳಿಗೆ ಹೆಚ್ಚಿಗೆ ಅವಕಾಶವಿರುವಂತೆ ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಆರ್. ಅನಂತರಾಮ್.—ಈ ವಿಚಾರವನ್ನು ಇಂಡಿಯಾ ಸರ್ಕಾರದವರೊಡನೆ ಪುನರಾಲೋಚನೆ ಮಾಡಿ ನೂಕ್ತ ಏರ್ಪಾಡು ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಐ.ಎ.ಎಸ್. ಪರೀಕ್ಷೆ ಎಂದಿದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಡಿ. ದೇವರಾಜ ಅರಸ್.—ಈಗಿರತಕ್ಕ I.A.S. ಅಧಿಕಾರಿಗಳಿಗೆಲ್ಲಾ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೊಸದಾಗಿ ಈಚೆಗೆ ತೆಗೆದುಕೊಂಡಿರತಕ್ಕ ಇಬ್ಬರಿಗೆ ವಿನಾಯ್ತಿ ಆಗಿದೆ, ಬಾಕಿಯವರಿಗೆ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಇತರರು ಯಾವ ಪರೀಕ್ಷೆಗೂ ಕೂರಲಲ್ಲವೆಂದು ಹೇಳಬಹುದೇ?

ಶ್ರೀ ಕಡಿದಾಳ್ ಮಂಜಪ್ಪ.—ಸೆಂಟ್ರಲ್ ರಿಕ್ರೂಟ್‌ಮೆಂಟ್‌ಬೋರ್ಡ್ ಎಂದು ಬಂದು ಈಗ I.A.S. ಪಟ್ಟಿಯಲ್ಲಿ ಸೇರಿರುವ ಅಧಿಕಾರಿಗಳನ್ನು interview ಮಾಡಿ ಅವರ ದಕ್ಷತೆ ಮುಂತಾದುವುಗಳನ್ನು ಗಮನಕ್ಕೆ ತೆಗೆದುಕೊಂಡು ಅವರನ್ನು I.A.S. ಲಿಸ್ಟಿಗೆ ಸೇರಿಸಿತು.

ಶ್ರೀ ಡಿ. ದೇವರಾಜ ಅರಸ್.—ಅವರಿಗೆ ಪರೀಕ್ಷೆಯೆಂದರೆ, ಅದು ಬರೆಯುವುದೇ, ಅಥವಾ Oral ಅಥವಾ ಸುಮ್ಮನೆ interview ಮಾಡುವುದೇ?

Sri Kadidal MANJAPPA.—It is a sort of *Viva-voce*.

ಶ್ರೀ ಡಿ. ದೇವರಾಜ್ ಅರಸ್.—ಈಗ ಎಲ್ಲರೂ ತಾವೂ I.A.S. ಆಗಬೇಕೆಂದು ಕೇಳುತ್ತಿರುವುದು, I.A.S.ಗೆ ಸಂಬಳ ಹೆಚ್ಚಿಗೆ ಇರುವುದರಿಂದ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಒಂದು ಕಾರಣ.

ಶ್ರೀ ಕೆ. ಪ್ರಭಾಕರ್.—ಪರೀಕ್ಷೆಯಲ್ಲಿ ಉತ್ತೀರ್ಣರಾದ I.A.S. ಆಫೀಸರಿಗೂ, ಪರೀಕ್ಷೆಯಲ್ಲದೆ I.A.S ಆಫೀಸರರಾಗಿರುವವರಿಗೂ ಏನಾದರೂ ವ್ಯತ್ಯಾಸ ವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ವ್ಯತ್ಯಾಸವನ್ನು ಕಂಡು ಹಿಡಿಯುವುದೂ ವಿವರಿಸುವುದೂ ಕಷ್ಟ.

ಶ್ರೀ ಜಿ. ಶಿವಪ್ಪ.—ನಮ್ಮ ಸಂಸ್ಥಾನದಲ್ಲಿ ನೂರಕ್ಕೆ 95 ಜನರು ಈ I.A.S. ವ್ಯವಸ್ಥೆಗೆ ವಿರೋಧವಾಗಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಮಂದಿ ವಿರೋಧವಾಗಿರುವಂತೆ ತೋರುತ್ತದೆ.

ಶ್ರೀ ಜಿ. ಶಿವಪ್ಪ.—ಈಗಲೂ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಅದರಿಂದ ಹೊರಗಾಗುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಮಾನ್ಯ ಸಭೆಯ ಅಭಿಪ್ರಾಯ ಹೀಗಿದೆಯೆಂದು ಕೇಂದ್ರ ಸರ್ಕಾರದವರಿಗೆ ಬೇಕಾದರೆ ತಿಳಿಸಬಹುದು.

ಶ್ರೀ ಜಿ. ಶಿವಪ್ಪ.—ನೀವು ಇವರಿಗೆ ಕೊಡಬೇಕಾದ ಸಂಬಳ ಸಾರಿಗೆಗಳು ಜಾಸ್ತಿಯಾಗಿರುವುದರಿಂದ, ತುಟ್ಟಿ ಭತ್ಯವೂ ಕೂಡ ನಮಗಿಂತ ಹೆಚ್ಚಿಗೆ ಇರುವುದರಿಂದ ಅದನ್ನು ಕಡಿಮೆ ಮಾಡುವುದು ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಡೀ ಇಂಡಿಯಾ ದೇಶಕ್ಕೆ ಇದು ಅನ್ವಯಿಸುವಂಥಾದ್ದು ; ಆದ್ದರಿಂದ ನಾವು ಮಾತ್ರ ನಮ್ಮ ಅಧಿಕಾರಿಗಳಿಗೆ ಕಡಮೆ ಮಾಡುವುದು ಸೂಕ್ತವಲ್ಲ ; ಅದು ಸಾಧ್ಯವೂ ಇಲ್ಲ.

ಶ್ರೀ ಜಿ. ಶಿವಪ್ಪ.—ತುಟ್ಟಿ ಭತ್ಯವನ್ನಾದರೂ ವಜಾ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತುಟ್ಟಿ ಭತ್ಯವೂ ಕೂಡ ಕೇಂದ್ರ ಸರ್ಕಾರದವರು ಮಾಡಿರುವ ನಿಯಮಗಳ ಮೇಲೆ ವಿಧಾಯಕವಾಗಿದೆ.

Sri S. SIVAPPA.—Can you think of reducing the dearness allowance, Sir ?

Sri Kadidal MANJAPPA.—I do not think it is feasible to reduce or abolish these allowances.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಜಾಪ್ರಭುತ್ವ ಇಂಡಿಯಾ ದೇಶದಲ್ಲಿ ಸ್ಥಾಪನೆಯಾದಮೇಲೆ, ಎಲ್ಲ ಸಂಸ್ಥಾನಗಳಲ್ಲೂ ಸರ್ವಸಮನ್ವಯವಾದ ಆಡಳಿತವಿರಬೇಕೆಂಬ ದೃಷ್ಟಿಯಿಂದಲೇ ಅಲ್ಲವೇ I.A.S. ಯೋಜನೆಯನ್ನು ಜಾರಿಗೆ ತಂದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಒಂದು ಕಾರಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೀಗಿರುವಾಗ ಮೈಸೂರು ಸಂಸ್ಥಾನವೊಂದು I.A.S.ನ್ನು ಬೇಡವೆಂದು ಹೇಳುವುದಕ್ಕೆ ಸಾಧ್ಯವೇ ; ಅದು ರಾಜ್ಯಾಂಗಕ್ಕೆ ವಿರೋಧವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇ ನಾನು ಹೇಳಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಂದಮೇಲೆ, ಇದನ್ನು Examine ಮಾಡುತ್ತೇವೆಂದು ಹೇಗೆ ಹೇಳಿದಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇವರಿಗಾಗಿ ಎಷ್ಟು ಖರ್ಚಾಗುತ್ತಿದೆ, ಎಂದು ಒಬ್ಬರು ಕೇಳಿದರು ; ಇನ್ನೊಬ್ಬ ಮಾನ್ಯ ಸದಸ್ಯರು ಇನ್ನು ಕೆಲವು ವಿವರಗಳನ್ನು ಕೇಳಿದರು. ಅದನ್ನೆಲ್ಲಾ ಪರಿಶೀಲನೆ ಮಾಡುತ್ತೇವೆಂದು ಹೇಳಿದೆ ಅಷ್ಟೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಶಾಸನ ಸಭೆಯಲ್ಲಿ I.A.S. ನಿಂದ ಹೊರಗಡೆ ಇರುತ್ತೇವೆಂದು ಹೇಳಬಹುದೆ ? ಅದೂ ರಾಜ್ಯಾಂಗಕ್ಕೆ ವಿರೋಧವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇ ಅದನ್ನು ಪರಿಶೀಲನಬೇಕೆಂದು ಹೇಳಿದ್ದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—I.A.S.ನ್ನು ಪೋಲೀಸ್ ಮತ್ತು ರೆವಿನ್ಯೂ ಇಲಾಖೆಗಳಲ್ಲಿ ಮಾತ್ರ ತಂದಿದ್ದೀರಲ್ಲಾ, ಬಾಕಿ ಇಲಾಖೆಗಳಿಗೂ ಏಕೆ ತಂದಿಲ್ಲ ?

Mr. SPEAKER.—That question does not arise.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—I.A.S. ನಿಂದ ದೇಶಕ್ಕೆ ಅನಾನುಕೂಲವಾಗುತ್ತಿದೆಯೆಂದು ಅನುಭವದಿಂದ ಕಂಡು ಬಂದಿರುವುದರಿಂದ ರಾಜ್ಯಾಂಗವನ್ನು ಬದಲಾವಣೆಮಾಡುವುದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—I.A.S. ನಿಂದ ದೇಶಕ್ಕೆ ಅನುಕೂಲವಿರುವುದರಿಂದಲೇ ಅದನ್ನು ರಾಜ್ಯಾಂಗದಲ್ಲಿ ನಮೂದು ಮಾಡಿರುವುದು. ಅನಾನುಕೂಲವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಮ್ಮ ಅನುಭವದಿಂದ ಅನಾನುಕೂಲವಾಗುತ್ತದೆಂದು ಕಂಡು ಬಂದಿದೆಯೆಂದು ನಲಹೆಮಾಡುವುದಕ್ಕಾಗುವುದಿಲ್ಲವೇ ?

(ಉತ್ತರವಿಲ್ಲ).

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಮಗೂ ಇಂಡಿಯಾ ಸರ್ಕಾರಕ್ಕೂ ಒಪ್ಪಂದವಾದ ಕಾಲದಲ್ಲಿ, ನಮ್ಮ ಸಂಸ್ಥಾನಕ್ಕೆ ಎಷ್ಟು per cent ಸ್ಥಾನಗಳನ್ನು ಉಳಿಸಿಕೊಳ್ಳಬೇಕು, ಎಷ್ಟು ಸ್ಥಾನಗಳನ್ನು ಕೇಂದ್ರದವರು ಭರ್ತಿಮಾಡಬೇಕು ಎಂದು ಮಾಡಿದೆಯೋ ಅಥವಾ ಅವರು ತೆಗೆದುಕೊಂಡವರೆಲ್ಲರನ್ನೂ ನೀವು ಇಟ್ಟುಕೊಳ್ಳಬೇಕೆಂದಿದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಯಾವ ಸ್ಥಾನಗಳು ಎಷ್ಟೆಷ್ಟಿರಬೇಕೆಂಬ ಬಗ್ಗೆ ಕೇಂದ್ರ ಸರ್ಕಾರದವರಿಗೂ ಈ ಸರ್ಕಾರದವರಿಗೂ ಒಪ್ಪಂದವಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಒಪ್ಪಂದದ ಪ್ರಕಾರ ಎಷ್ಟು I.A.S. ಜನರನ್ನು ನೀವು ಉಳಿಸಿಕೊಳ್ಳಬೇಕೆಂದಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—I.A.S. ಸ್ಥಾನಗಳು ಇಷ್ಟಿರಬೇಕೆಂದು ಒಪ್ಪಂದದಲ್ಲಿ ನಿಗದಿಯಾಗಿದೆ. ಎಷ್ಟು ಎಂದು ಈಗಲೇ ಹೇಳಲಾರೆ.

Lands in Magadi Taluk, unauthorisedly cultivated.

Q.—639. Sri S. SIDDAPPA (Magadi).—

Will the Government be pleased to state :—

(*a*) the number of acres of forest lands, gomal lands and kharab lands which are being unauthorisedly cultivated in Magadi Taluk ;